
Shot On iPhone 11 Pro Max
06/06/2022 10:39:37


06/06/2022
MIT Campus

ಸುದ್ದಿಮನೆ ಪತ್ರಿಕೆ
Suddimane Patrike

# ಪರಿಸರ ಮತ್ತು ಪ್ರಕೃತಿಯ ಬಗ್ಗೆ ನಮಗೆ ಕಾಳಜಿ ಇರಬೇಕು : ಹುಸೇನ್ ಹೈಕಾಡಿ



**ಸುದ್ದಿಮನೆ**

ನಮ್ಮ ಪರಿಸರ ಮತ್ತು ಪ್ರಕೃತಿಯ ಬಗ್ಗೆ ನಮಗೆ ಕಾಳಜಿ ಇರಬೇಕು. ಒಂದು ಮರ ಕಡಿದರೇ ಹತ್ತು ಗಿಡ ನೆಡಬೇಕು ಆದರೆ ಈಗ ಕೇವಲ ಮರ ಕಡಿವುದಾಗಿದೆ. ಹಿಂದೆ ಪೂರ್ವಿಕರು ಮರಗಳನ್ನು ಕಡಿದರು ಅದಕ್ಕಿಂತ ಹೆಚ್ಚು ಗಿಡಗಳನ್ನು ನೆಡುತ್ತಿದ್ದರು. ಅದೇ ರೀತಿ ನಾವು ಸಹ ಅಳವಡಿಸಿಕೊಳ್ಳಬೇಕು. ಪ್ರಕೃತಿ ಭೂಮಿ ಆರೋಗ್ಯವಾಗಿದ್ದರೆ ಬದುಕು ಹಸನಾಗುತ್ತದೆ. ನಮ್ಮಲ್ಲಿ ಪ್ರಕೃತಿಯನ್ನು ಕಾಪಾಡುವ ಮನೋಭಾವ ಬಂದರೇ ಅದು ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ ಎಂದು ಜೆಸಿಐ ಕುಂದಾಪುರ ಸಿಟಿಯ ಆಶ್ರಯದಲ್ಲಿ ಮೂಡ್ಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನೋಲಜಿ ಕಾಲೇಜಿನ ಆವರಣದಲ್ಲಿ ಜರುಗಿದ ವಿಶ್ವ ಪರಿಸರ ದಿನಾಚರಣೆ ಯ ಪ್ರಯುಕ್ತ ಹುಸೇನ್ ಹೈಕಾಡಿ ಅವರು ಗಿಡ ನೆಟ್ಟು ಮಾತನಾಡಿದರು.

ಈ ಸಂದರ್ಭದಲ್ಲಿ ಜೆಸಿಐ ಕುಂದಾಪುರ ಸಿಟಿಯ ಅಧ್ಯಕ್ಷೆ ಡಾ. ಸೋನಿ, ಸದ್ಯಸೆ ಡಾ. ಲಕ್ಷ್ಮಿ ಪೂಜಾರಿ, ಹಾಸ್ಟೆಲ್ ಮೇಲ್ವಿಚಾರಕರಾದ ರಾಜು ಪೂಜಾರಿ, ಹಾಸ್ಟೆಲ್‌ನ ವಾರ್ಡನ್‌ಗಳಾದ ಸುಪ್ರಿತಾ ಶಕುಂತಲ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.